17.	ಉತ್ತರ ಕನ್ನಡ	1.26
18.	ಗದಗ	0.18
19.	ಹಾವೇರಿ	0.28
20.	ರಾಯಚೂರು	0.00
21.	ಕೊಪ್ಪಳ	0.18
22.	ಬಳ್ಳಾರಿ	0.28
23.	ತೋ.ಉ.ನಿ. (ಸಸಂ). ಲಾಲ್‌ಬಾಗ್	50.47
	ಒಟ್ಟು	**1412.61**

ರಾಜ್ಯದಲ್ಲಿ ಪುಷ್ಪ ಕೃಷಿ ಅಭಿವೃದ್ಧಿಗೊಳಿಸುವ ಬಗ್ಗೆ

2394 (2860) : ಶ್ರೀ ಯೋಗೀಶ್ ಭಟ್ ಎನ್. (ಮಂಗಳೂರು) ಮಾನ್ಯ ತೋಟಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ತೋಟಗಾರಿಕೆ ಉತ್ಪನ್ನಗಳನ್ನು ಬೆಳೆಯುವ ಪ್ರದೇಶಗಳಿಗೆ ಆರ್ಥಿಕ ಅಭಿವೃದ್ಧಿ ಪಡಿಸುವ ದೃಷ್ಟಿಯಿಂದ ಸರ್ಕಾರ ಹಾಕಿಕೊಂಡ ಯೋಜನೆಗಳೇನು;

ಆ) ಪುಷ್ಪಕೃಷಿ ಅಭಿವೃದ್ಧಿಗೊಳಿಸಲು ಹಾಗೂ ತೋಟಗಾರಿಕಾ ಉತ್ಪನ್ನಗಳಿಗೆ ಮಾರುಕಟ್ಟೆ ಒದಗಿಸಲು ಸರ್ಕಾರ ಕೈಗೊಂಡ ಕ್ರಮಗಳೇನು; ಆಗಿರುವ ರಫ್ತು ಎಷ್ಟು; ಯಾವ ಯಾವ ದೇಶಗಳಿಗೆ ಆಗಿವೆ?

ಶ್ರೀ ಎಂ. ಶಿವಣ್ಣ (ತೋಟಗಾರಿಕೆ ಸಚಿವರು)

ಅ) ರಾಜ್ಯದಲ್ಲಿ ಸಮಗ್ರ ತೋಟಗಾರಿಕೆ ಅಭಿವೃದ್ಧಿಗಾಗಿ ಕೆಳಕಾಣಿಸಿದ ಪ್ರಮುಖ ಯೋಜನೆಗಳನ್ನು ಹಮ್ಮಿಕೊಳ್ಳಲಾಗಿದೆ.

ತೋಟಗಾರಿಕೆ ಬೆಳೆಗಳಿಗಾಗಿ ಉತ್ಕೃಷ್ಟ ಗುಣಮಟ್ಟದ ನಾಟಿ ಮಾಡವ ವಸ್ತುಗಳ ಉತ್ಪಾದನೆ ಮತ್ತು ವಿತರಣೆ, ಇಲಾಖಾ ಪ್ರಯೋಗಶಾಲೆಗಳ ಅಭಿವೃದ್ಧಿ, ತೋಟದ ಬೆಳೆಗಳ ಕೀಟರೋಗಗಳ ಸಮಗ್ರ ನಿಯಂತ್ರಣ, ರೈತರಿಗೆ ತರಬೇತಿ, ವಿಶೇಷ ಘಟಕ ಯೋಜನೆ, ಗಿರಿಜನ ಉಪಯೋಜನೆ, ಉಷ್ಣ ಮತ್ತು ಶುಷ್ಕವಲಯದ ಹಣ್ಣುಗಳ ಸಮಗ್ರ ಅಭಿವೃದ್ಧಿ, ತರಕಾರಿ ಬೆಳೆಗಳ ಸಮಗ್ರ ಅಭಿವೃದ್ಧಿ, ಸಮಗ್ರ ಕೋಕೋ ಅಭಿವೃದ್ಧಿ, ಸಮಗ್ರ ಗೇರು ಅಭಿವೃದ್ಧಿ, ಔಷಧೀಯ ಹಾಗೂ ಸುಗಂಧಿತ ಬೆಳೆಗಳ ಸಮಗ್ರ ಅಭಿವೃದ್ಧಿ, ಕೃಷಿಯಲ್ಲಿ ಪ್ಲಾಸ್ಟಿಕ್ ಬಳಕೆ, ವಾಣಿಜ್ಯ ಪುಷ್ಪಗಳ ಸಮಗ್ರ ಅಭಿವೃದ್ಧಿ, ಸಾಂಬಾರು ಬೆಳೆಗಳ ಸಮಗ್ರ ಅಭಿವೃದ್ಧಿ ತಾಳೆಬೆಳೆ ಅಭಿವೃದ್ಧಿ ಯೋಜನೆ, ಸಮಗ್ರ ತೆಂಗು ಬೇಸಾಯ ಇತರೆ.

ಆ) ಪುಷ್ಪಿಕೃಷಿ ಅಭಿವೃದ್ಧಿಗೊಳಿಸಲು ಕೆಳಕಾಣಿಸಿದ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

1. ಗುಣಮಟ್ಟದ ಬೀಜ, ಗೆಡ್ಡೆ ಹಾಗೂ ಸಸಿಗಳನ್ನು ಫಲಾನುಭವಿಗಳಿಗೆ ನೀಡಲಾಗುತ್ತದೆ.

2. ರೈತರಿಗೆ ವಾಣಿಜ್ಯ ಪುಷಾಭಿವೃದ್ಧಿಯ ಬಗ್ಗೆ ಮಾಹಿತಿ ನೀಡಲು ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ರೈತರಿಗೆ ತರಬೇತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

3. ಗುಣಮಟ್ಟದ ಹೂವುಗಳನ್ನು ನಿಯಂತ್ರಿತ ಹವಾಮಾನದಲ್ಲಿ ಬೆಳೆಯಲು ಪುಷ್ಪ ಕೃಷಿಕರನ್ನು ಪ್ರೋತ್ಸಾಹಿಸಲು ಹಸಿರುಮನೆ ಹಾಗೂ ನೆರಳು ಪರದೆ ನಿರ್ಮಾಣಕ್ಕಾಗಿ ಸಹಾಯಧನವನ್ನು ನೀಡಲಾಗುತ್ತದೆ.

4. ಪುಷ್ಪೋದ್ಯಮವನ್ನು ಪ್ರೋತ್ಸಾಹಿಸುವ ಸಲುವಾಗಿ ಪುಷ್ಪ ಮಾರುಕಟ್ಟೆಯನ್ನು ಅಭಿವೃದ್ಧಿಪಡಿಸಲು ಇಚ್ಚಿಸುವ ಬೆಳೆಗಾರರ ಸಂಘ, ಸಂಸ್ಥೆಗಳಿಗೆ, ಪುಷ್ಪ ಮಾರಾಟ ಮಳಿಗೆ ನಿರ್ಮಾಣ, ಸಾಗಣೆ ವಾಹನ ಖರೀದಿ, ಪ್ರೀಕೂಲಿಂಗ್ ಘಟಕ ಹಾಗೂ ಮಾರುಕಟ್ಟೆ ಗೋದಾಮ್‌ಗಳ ಮೂಲಭೂತ ಸೌಕರ್ಯಗಳ ಸಹಾಯಧನ ನೀಡಲಾಗುವುದು.

5. ಬೆಂಗಳೂರಿನಲ್ಲಿ ಒಂದು ಆಧುನಿಕ ಪುಷ್ಪ ಮಾರುಕಟ್ಟೆ ಹಾಗೂ ಹರಾಜು ಮಾರುಕಟ್ಟೆಯನ್ನು ಹೆಬ್ಬಾಳದಲ್ಲಿ ಸ್ಥಾಪಿಸಲಾಗಿದೆ.

6. ಪುಷ್ಪಾಭಿವೃದ್ಧಿಗಾಗಿ ಕೃಷಿ ರಫ್ತು ವಲಯ (AEZ) ಸ್ಥಾಪಿಸಲಾಗಿದೆ.

ತೋಟಗಾರಿಕೆ ಉತ್ಪನ್ನಗಳಿಗೆ ಮಾರುಕಟ್ಟೆ ಒದಗಿಸಲು ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿದೆ.

1. ಸಹಕಾರ ವಲಯದಲ್ಲಿ ಹಾಪ್‌ಕಾಮ್ಸ್, ಕೆ.ಹೆಚ್.ಎಫ್., ಜಿಲ್ಲಾ ತೋಟಗಾರಿಕೆ ಬೆಳೆಗಳ ಉತ್ಪನ್ನಗಳ ಮಾರಾಟ ಮತ್ತು ಸಂಸ್ಕರಣೆ ಸಹಕಾರ ಸಂಘಗಳನ್ನು ಸ್ಥಾಪಿಸಿ ಜಿಲ್ಲಾ ಮಟ್ಟದಲ್ಲಿ ಮಾರುಕಟ್ಟೆ ಸೌಲಭ್ಯ ಕಲ್ಪಿಸಲಾಗಿದೆ.

2. ರಾಜ್ಯ ಸರ್ಕಾರದ ಉತ್ತೇಜನಕಾರಿ ನಿಲುವಿನಿಂದಾಗಿ ಎನ್.ಡಿ.ಡಿ.ಬಿ. ಸಂಸ್ಥೆಯು ಕನ್ನಮಂಗಲದಲ್ಲಿ ಒಂದು ಬೃಹತ್ ಹಣ್ಣು ಮತ್ತು ತರಕಾರಿ ಮಾರುಕಟ್ಟೆ ಸಂಕೀರ್ಣವನ್ನು ಸ್ಥಾಪಿಸುತ್ತಿದೆ.

3. ರಾಜ್ಯ ಕೃಷಿ ಮಾರುಕಟ್ಟೆ ಇಲಾಖೆಮತಿಯಿಂದ ಯಲಹಂಕದಲ್ಲಿ ರೈತ ಸಂತೆ ಮಾರುಕಟ್ಟೆ ಸ್ಥಾಪಿಸಲಾಗಿದೆ.

4. ಕೃಷಿ/ತೋಟಗಾರಿಕೆ ಉತ್ಪನ್ನಗಳ ರಫ್ತಿನ ಅಭಿವೃದ್ಧಿಗಾಗಿ ಕರ್ನಾಟಕ ರಾಜ್ಯ ಕೃಷಿ ಉತ್ಪನ್ನಗಳ ಸಂಸ್ಕರಣೆ ಮತ್ತು ರಫ್ತು ನಿಗಮವನ್ನು ಸ್ಥಾಪಿಸಿದೆ (ಕೆಪೆಕ್) ಹೂವುಗಳ ಮಾರಾಟಕ್ಕಾಗಿ ಕೆ.ಎ.ಐ.ಸಿ. ಮತಿಯಿಂದ ಪ್ರತ್ಯೇಕ ಹೂವು ಹರಾಜು ಕೇಂದ್ರವನ್ನು ಪ್ರಾರಂಭಿಸಲಾಗಿದೆ.

5. ಕೇಂದ್ರ ಸರ್ಕಾರದ ಸಹಯೋಗದೊಂದಿಗೆ ಕೆಲವು ತೋಟಗಾರಿಕೆ ಉತ್ಪನ್ನಗಳಿಗೆ ಬೆಂಬಲ ಬೆಲೆ ಒದಗಿಸಲಾಗುತ್ತಿದೆ. ಉದಾಹರಣೆ ಹೊಸ ಚಾಲಿ ಅಡಿಕೆ, ಒಣಕೊಬ್ಬರಿ, ತಾಳೆಬೆಳೆ, ಆಲೂಗಡ್ಡೆ ಮತ್ತು ಈರುಳ್ಳಿ.

6. ತೋಟಗಾರಿಕೆ ಉತ್ಪನ್ನಗಳ ರಫ್ತು ಅಭಿವೃದ್ಧಿಗಾಗಿ ಬೆಂಗಳೂರು ಗುಲಾಬಿ ಈರುಳ್ಳಿ, ಗರ್ಕಿನ್ಸ್ ಮತ್ತು ಪುಷ್ಪೋದ್ಯಮಕ್ಕೆ ಕೃಷಿ ರಫ್ತು ವಲಯಗಳನ್ನು ಸ್ಥಾಪಿಸಲಾಗಿದ್ದು ಮಾವು, ನಿಂಬೆ, ವೆನಿಲ್ಲಾ, ದ್ರಾಕ್ಷಿ, ಔಷಧೀಯ ಹಾಗೂ ಸುಗಂಧ ಸಸ್ಯಗಳಿಗೆ ಪ್ರತ್ಯೇಕ ರಫ್ತು ವಲಯಗಳನ್ನು ಸ್ಥಾಪಿಸುವ ಬಗ್ಗೆ ಸರ್ಕಾರದ ಪರಿಶೀಲನೆಯಲ್ಲಿದೆ.

7. ಕೊಯ್ಲಿನ ನಂತರದ ನಿರ್ವಹಣೆಯಲ್ಲಿ ಪ್ರಮುಖ ಪಾತ್ರ ವಹಿಸುವ ಶೀತಲ ಗೃಹಗಳು ಉಪಯೋಗಿಸುವ ವಿದ್ಯುಚ್ಚಕ್ತಿಯ ಪ್ರತಿ ಯೂನಿಟ್‌ಗೆ 1/– ರೂಪಾಯಿ ಸಹಾಯಧನ ನೀಡಲಾಗುತ್ತಿದೆ.

8. ಕೇಂದ್ರ ಸರ್ಕಾರದ ಎನ್.ಹೆಚ್.ಬಿ., ಅಪೇಡಾ, ಸಿ.ಡಿ.ಬಿ., ಎನ್.ಸಿ.ಡಿ.ಸಿ., ಆಹಾರ ಸಂಸ್ಕರಣ ಮಂತ್ರಾಲಯ ಮತ್ತು ವಿವಿಧ ಮಂಡಳಿಗಳಿಂದ ಹಣಕಾಸಿನ ನೆರವನ್ನು ತೋಟಗಾರಿಕಾ ಉತ್ಪನ್ನಗಳ

ಉತ್ಪಾದನೆ, ಶೇಖರಣೆ ಹಾಗೂ ಮಾರುಕಟ್ಟೆಗಾಗಿ ಹಣಕಾಸಿನ ನೆರವನ್ನು ಪಡೆಯಲು ಕ್ರಮ ತೆಗೆದುಕೊಳ್ಳಲಾಗಿದೆ.

9. ರಾಜ್ಯದಲ್ಲಿ ತೋಟಗಾರಿಕೆ ಉತ್ಪನ್ನಗಳ ವೈಜ್ಞಾನಿಕ ಸಂಸ್ಕರಣೆ, ಮಾರುಕಟ್ಟೆ ಮತ್ತು ರಫ್ತನ್ನು ಉತ್ತೇಜಿಸಲು 6 ಆಹಾರ ಮತ್ತು ಕೃಷಿ ತಂತ್ರಜ್ಞಾನ ಪಾರ್ಕ್‌ಗಳನ್ನು ನಿರ್ಮಿಸಲು ಉದ್ದೇಶಿಸಿದ್ದು, ಈಗಾಗಲೇ ಬಾಗಲಕೋಟೆ ಮತ್ತು ಮಾಲೂರುಗಳಲ್ಲಿ ಪಾರ್ಕ್‌ಗಳನ್ನು ನಿರ್ಮಿಸಲು ಕೇಂದ್ರ ಸರ್ಕಾರದ ಅನುಮೋದನೆ ದೊರಕಿದೆ.

10. ಪುಷ್ಪೋದ್ಯಮ ಅಭಿವೃದ್ಧಿಗೆ ಅಂತರ ರಾಷ್ಟ್ರೀಯ ಮಟ್ಟದ ಹರಾಜು ಕೇಂದ್ರವನ್ನು ಬೆಂಗಳೂರಿನಲ್ಲಿ ಸ್ಥಾಪಿಸಲು ಕ್ರಮ ಕೈಗೊಳ್ಳಲಾಗಿದೆ.

ರಫ್ತು ದೇಶಗಳು :

ಸುಮಾರು 1670 ಕೋಟಿ ಮೌಲ್ಯದ ಉತ್ಪನ್ನಗಳನ್ನು (ಕಾಫಿ ಸೇರಿ) 2001–02ರಲ್ಲಿ ರಫ್ತು ಮಾಡಲಾಗಿದೆ. ಈ ಉತ್ಪನ್ನಗಳನ್ನು ಯೂರೋಪ್, ಅಮೆರಿಕ, ಮೆಕ್ಸಿಕೋ, ಮಧ್ಯಪ್ರಾಚ್ಯ, ಶ್ರೀಲಂಕಾ, ಇಂಡೋನೇಷಿಯಾ, ಆಸ್ಟ್ರೇಲಿಯಾ, ಸಿಂಗಪೂರ್, ಜಪಾನ್, ಮತ್ತು ಇತರೆ ದೇಶಗಳಿಗೆ ರಫ್ತು ಮಾಡಲಾಗಿದೆ.

ಇ) ಅಡಿಕೆ ಮತ್ತು ತೆಂಗಿನ ಬೆಳೆಗಾರರು ಎದುರಿಸುತ್ತಿರುವ ಸಮಸ್ಯೆಗಳ ಪರಿಹಾರಕ್ಕೆ ಸರ್ಕಾರ ಕೈಗೊಂಡ ಕ್ರಮಗಳು ಈ ಕೆಳಕಂಡಂತೆ ಇರುತ್ತವೆ.

1. ತೆಂಗಿನ ಪ್ರದೇಶ ವಿಸ್ತರಣೆಗೆ ರೈತರಿಗೆ ಸಹಾಯಧನ ಒದಗಿಸಲಾಗುತ್ತಿದೆ.
2. ಉತ್ತಮ ತೆಂಗಿನ ಸಸಿಗಳನ್ನು ಉತ್ಪಾದಿಸಿ ಯೋಗ್ಯಬೆಲೆಯಲ್ಲಿ ರೈತರಿಗೆ ಒದಗಿಸಲಾಗುತ್ತಿದೆ.
3. ಮಾರುಕಟ್ಟೆಯಲ್ಲಿ ತೆಂಗಿನ ಮತ್ತು ಅಡಿಕೆಯು ಬೆಲೆ ಕುಸಿದಾಗ ರಾಜ್ಯ ಸರ್ಕಾರವು ಕೇಂದ್ರ ಸರ್ಕಾರದ ಸಹಯೋಗದೊಂದಿಗೆ ಬೆಂಬಲಬೆಲೆ ಯೋಜನೆ ಜಾರಿಗೊಳಿಸುತ್ತಿದೆ.
4. ಈ ಬೆಳೆಗಳ ಆಧುನಿಕ ಬೇಸಾಯ ಕ್ರಮಗಳ ಬಗ್ಗೆ ರೈತರಿಗೆ ತಾಂತ್ರಿಕ ಮಾಹಿತಿ ನೀಡಲಾಗುತ್ತಿದೆ.
5. ರೈತರಿಗೆ ಜಿಲ್ಲಾ ಪಂಚಾಯತ್‌ಗಳ ಮೂಲಕಶೇ. 50ರ ರಿಯಾಯಿತಿ ದರದಲ್ಲಿ ಸಸ್ಯ ಸಂರಕ್ಷಣಾ ಔಷಧಿಗಳನ್ನು ವಿತರಿಸಲಾಗುತ್ತಿದೆ.
6. ತೆಂಗಿನ ಮರಗಳ ಉತ್ಪಾದಕತೆ ಹೆಚ್ಚಿಸಲು ಬೇಕಾಗುವ ಪೋಷಕಾಂಶಗಳನ್ನು ಆಯ್ದ ಫಲಾನುಭವಿಗಳಿಗೆ ನೀಡಲಾಗುತ್ತಿದೆ.
7. ತೆಂಗಿನ ಮತ್ತು ಅಡಿಕೆ ತೋಟಗಳಿಂದ ಆದಾಯವನ್ನು ಹೆಚ್ಚಿಸಲು ವೆನಿಲ್ಲಾ, ಕಾಳುಮೆಣಸು, ಕೋಕೋ ಇತ್ಯಾದಿ ಬೆಳೆಗಳನ್ನು ಅಂತರ ಬೆಳೆಗಳಾಗಿ ಬೆಳೆಯಲು ರೈತರಿಗೆ ಪ್ರೋತ್ಸಾಹಿಸಲಾಗುತ್ತಿದೆ.
8. ಈ ಬೆಳೆಗಳನ್ನು ಬೆಳೆಸಲು ಸಾಲ ಸೌಲಭ್ಯವನ್ನು ಒದಗಿಸಲು ನೆರವು ನೀಡಲಾಗುತ್ತಿದೆ.
9. ತೋಟಗಳ ತ್ಯಾಜ್ಯ ವಸ್ತುಗಳಿಂದ ಸಾವಯುವ ಗೊಬ್ಬರ ಹಾಗೂ ಎರೆಹುಳು ಗೊಬ್ಬರಗಳನ್ನಾಗಿ ಪರಿವರ್ತಿಸಲು ಪ್ರೋತ್ಸಾಹಿಸಲಾಗುತ್ತಿದೆ.
10. ತೆಂಗಿನ ಉತ್ಪನ್ನಗಳ ಸಮರ್ಥ ಬಳಕೆಗಾಗಿ ಪ್ರಾತ್ಯಕ್ಷಿತೆ ಮತ್ತು ತರಬೇತಿ ಕೇಂದ್ರವನ್ನು ಸ್ಥಾಪಿಸಲು ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

11. ತೆಂಗಿನ ಕಪ್ಪುತಲೆ ಹುಳುವಿನ ನಿಯಂತ್ರಣೆಗಾಗಿ ವಿವಿಧ ಪರೋಪ ಜೀವಿಗಳನ್ನು ಇಲಾಖೆಯ ಪ್ರಯೋಗ ಶಾಲೆಗಳಲ್ಲಿ ಉತ್ಪಾದಿಸಿ ರೈತರ ತೋಟಗಳಿಗೆ ಉಚಿತವಾಗಿ ವಿತರಿಸಲಾಗುತ್ತಿದೆ.

12. ತೆಂಗಿನ ನುಸಿ ನಿರ್ವಹಣೆಗಾಗಿ ತೆಂಗಿನ ಮರಗಳ ಆರೋಗ್ಯ ಮಟ್ಟವನ್ನು ಅಭಿವೃದ್ಧಿಪಡಿಸಲು ಬ್ಲಾಕ್ ಪ್ರಾತ್ಯಕ್ಷತೆ ಕೈಗೊಳ್ಳುವ ಮೂಲಕ ಪೋಷಕಾಂಶಗಳ ಸೌಲಭ್ಯಗಳನ್ನು ಆಯ್ದ ರೈತರಿಗೆ ಒದಗಿಸಲಾಗುತ್ತಿದೆ.

13. ತೆಂಗಿನ ನೀರಾ ಸಂಸ್ಕರಣೆ ಮತ್ತು ಬಳಕೆ ಕುರಿತಂತೆ ಸಂಶೋಧನೆ ಕೈಗೊಳ್ಳಲು CFTRI/ DFRLಗೆ ಹಣಕಾಸಿನ ನೆರವು ಒದಗಿಸಲಾಗಿದೆ.

ಮೈಸೂರು–ಚಾಮರಾಜನಗರ ಜಿಲ್ಲೆಗಳ ವ್ಯಾಪ್ತಿಯಲ್ಲಿ ಪರಿಶಿಷ್ಟ ಜಾತಿ/ಪಂಗಡಗಳ ಹಾಗೂ ಹಿಂದುಳಿದ ವರ್ಗಗಳ ಸಾರ್ವಜನಿಕ ವಿದ್ಯಾರ್ಥಿ ನಿಲಯಗಳ ಮಂಜೂರಾತಿ

312 (2922) : ಶ್ರೀ ಎ.ಆರ್. ಕೃಷ್ಣಮೂರ್ತಿ (ಸಂತೇಮರಳ್ಳಿ) ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಚಾಮರಾಜನಗರ ಹಾಗೂ ಮೈಸೂರು ಜಿಲ್ಲೆಗಳ ವ್ಯಾಪ್ತಿಯಲ್ಲಿ ಪರಿಶಿಷ್ಟಜಾತಿ/ವರ್ಗಗಳ ಹಾಗೂ ಹಿಂದುಳಿದ ವರ್ಗಗಳ ಬಾಲಕ/ಬಾಲಕಿಯರ ವಸತಿನಿಲಯಗಳ ಸಂಖ್ಯೆ ಎಷ್ಟು;

ಆ) ಇವುಗಳಲ್ಲಿ ಎಷ್ಟು ವಸತಿನಿಲಯಗಳಿಗೆ ಸ್ವಂತ ಕಟ್ಟಡಗಳಿವೆ; ಉಳಿದ ವಸತಿನಿಲಯಗಳಿಗೆ ಕಟ್ಟಡಗಳನ್ನು ಮಂಜೂರು ಮಾಡಲಾಗಿದೆಯೇ; ಮಾಡಿದ್ದಲ್ಲಿ ಯಾವಾಗ ಮಾಡಲಾಗಿದೆ; ಇಲ್ಲದಿದ್ದರೆ, ಅದಕ್ಕೆ ಕಾರಣಗಳೇನು; ಕ್ಷೇತ್ರವಾರು ವಿವರಗಳನ್ನು ನೀಡುವುದು?

ಶ್ರೀ ಎ. ಕೃಷ್ಣಪ್ಪ (ಸಮಾಜ ಕಲ್ಯಾಣ ಸಚಿವರು)

ಅ) ಸಮಾಜ ಕಲ್ಯಾಣ ಇಲಾಖೆ :

ಕ್ರ. ಸಂ.	ಜಿಲ್ಲೆ	ಮೆಟ್ರಿಕ್–ಪೂರ್ವ ವಿದ್ಯಾರ್ಥಿನಿಲಯಗಳು			ಮೆಟ್ರಿಕ್–ನಂತರದ ವಿದ್ಯಾರ್ಥಿನಿಲಯಗಳು			ಒಟ್ಟು
		ಬಾಲಕರು	ಬಾಲಕಿಯರು	ಒಟ್ಟು	ಬಾಲಕರು	ಬಾಲಕಿಯರು	ಒಟ್ಟು	
1.	ಚಾಮರಾಜನಗರ	25	9	34	7	3	10	44
2.	ಮೈಸೂರು	31	13	44	13	4	17	61

ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ :

ಕ್ರ. ಸಂ.	ಜಿಲ್ಲೆ	ಮೆಟ್ರಿಕ್–ಪೂರ್ವ ವಿದ್ಯಾರ್ಥಿನಿಲಯಗಳು			ಮೆಟ್ರಿಕ್–ನಂತರದ ವಿದ್ಯಾರ್ಥಿನಿಲಯಗಳು			ಒಟ್ಟು
		ಬಾಲಕರು	ಬಾಲಕಿಯರು	ಒಟ್ಟು	ಬಾಲಕರು	ಬಾಲಕಿಯರು	ಒಟ್ಟು	
1.	ಚಾಮರಾಜನಗರ	2	3	5	–	–	–	5
2.	ಮೈಸೂರು	5	5	10	1	–	1	11